೨. ಸುಮಾರು ೬೦.೬೭ ಕೋಟಿ ರೂಪಾಯಿಗಳನ್ನು ಯಂತ್ರಗಳನ್ನು ಸರಬರಾಜು ಮಾಡುವವರಿಂದ ಅವರು ನೀಡುವ ಮುಂದೂಡಲ್ಪಟ್ಟ ಪಾವತಿ ಅವಕಾಶದ ಮೂಲಕವು.

೩. ಉಳಿದ ಹಣವನ್ನು ಮಂಡಳಿಯು ಯೋಜನಾ ಮೂಲಗಳ ಮೂಲಕ ಒದಗಿಸುವ ಯೋಚನೆಯಿದೆ. ಒಂದು ವೇಳೆ ಕೇಂದ್ರ ಸರ್ಕಾರವು ಮಂಡಳಿಗೆ ದೀರ್ಘಾವಧಿ ಸಾಲ ಪಡೆಯಲು ಅನುಮತಿ ನೀಡದಿದ್ದಲ್ಲಿ ಕೇಂದ್ರ ಸರ್ಕಾರದ ಪವರ್ ಫೈನಾನ್ಸ್ ಕಾರ್ಪೋರೇಷನ್‌ನಿಂದ ಹಣ ಸಾಲ ಪಡೆಯಲಾಗುವುದು.

೪) ಇಲ್ಲಿಯವರೆಗೆ ಆಗಿರುವ ಪ್ರಗತಿ,—

೧. ೬೫ ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದ್ದು ಇನ್ನೂ ೫೫ ಎಕರೆ ಜಮೀನಿನ ಸ್ವಾಧೀನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಸ್ವಾಧೀನ ಪಡಿಸಿಕೊಂಡಿರುವ ಭೂಮಿಯು ಸುತ್ತಲೂ ಕಾಂಪೌಂಡ್ ಹಾಕಲಾಗಿದೆ.

೨. ರೈಲ್ವೆ ಮಂಡಳಿಯವರಿಂದ ಯಲಹಂಕ ರೈಲು ನಿಲ್ದಾಣದಿಂದ ಘಟಕದವರೆಗೆ ರೈಲಿನ ಮಾರ್ಗ ಹಾಕುವ ಕೆಲಸ ಪ್ರಗತಿಯಲ್ಲಿದೆ. ಈ ಬಾಬ್ತು ರೈಲ್ವೆ ಮಂಡಳಿಗೆ ೨.೦೬ ಕೋಟಿ ರೂಪಾಯಿ ಪಾವತಿ ಮಾಡಿದೆ.

೩. ಜಲಮಂಡಳಿಯವರಿಗೆ ನೀರು ಸರಬರಾಜಿಗಾಗಿ ಕೊಳವೆ ಹಾಕಲು ಈಗಾಗಲೇ ೨೦ ಲಕ್ಷ ರೂಪಾಯಿ ಪಾವತಿ ಮಾಡಲಾಗಿದೆ. ನಿವೇಶನದಲ್ಲಿ ೪ ಕೊಳವೆ ಭಾವಿ ಹಾಕಲಾಗಿದೆ.

೪. ಈ ಘಟಕಕ್ಕೆ ಬೇಕಾಗುವ ಇಂಧನದ ಪೂರೈಕೆ ಕಾರ್ಯವನ್ನು ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ವಹಿಸಲಾಗಿದ್ದು ಅವರು ಇಂಧನವನ್ನು ಘಟಕದ ಆವರಣದಲ್ಲಿ ಶೇಖರಿಸಲು ಬೇಕಾಗುವ ಉಗ್ರಾಣಗಳನ್ನು ಅವರ ಖರ್ಚಿನಲ್ಲೇ ನಿರ್ಮಿಸಲು ಒಪ್ಪಿದ್ದಾರೆ.

೫. ಈ ಘಟಕಕ್ಕೆ ಬೇಕಾಗುವ ಇಂಧನವನ್ನು ಸರಬರಾಜು ಮಾಡಲು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಸಚಿವಾಲಯ ಅನುಮತಿ ನೀಡಿದೆ.

೬. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮಾಲಿನ್ಯ ನಿಯಂತ್ರಣ ಮಂಡಳಿಗಳ ವಾಯುಮಂಡಲ ಅಧಿಕಾರಿಗಳ, ಕೇಂದ್ರದ ಪರಿಸರಣ ಇಲಾಖೆಯ ಮತ್ತು ಅರಣ್ಯ ಕಡಿಯುವಿಕೆಗೆ ಅನುಮತಿ ಪಡೆಯಲಾಗಿದೆ.

೭. ಕಾಮಗಾರಿ ಕೆಲಸಗಳಿಗಾಗಿ ಟೆಂಡರುಗಳನ್ನು ಕರೆಯಲಾಗಿದೆ.

೮. ಘಟಕಕ್ಕೆ ಬೇಕಾಗುವ ಡೀಸೆಲ್ ವಿದ್ಯುದುತ್ಪಾದನಾ ಯಂತ್ರಗಳ ಸರಬರಾಜುದಾರರನ್ನು ತೀರ್ಮಾನಿಸಲಾಗಿದ್ದ ಸಧ್ಯದಲ್ಲೇ ಈ ಯಂತ್ರಗಳ ಸರಬರಾಜಿಗೆ ಕ್ರಯಾದೇಶ ನೀಡಲಾಗುತ್ತದೆ.

ಈ ಸಭೆಯಲ್ಲಿ ಮಂಡಿಸಲಾದ ಕಾಗದ ಪತ್ರಗಳು.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.—

ಅ. ೧೯೫೧ನೇ ಇಸವಿಯ ರಾಜ್ಯ ಆರ್ಥಿಕ ನಿಗಮಗಳ ಕಾಯ್ದೆ ೫೮(೩)ನೇ ಕಲಮಿನ ಮೇರೆಗೆ ಕರ್ನಾಟಕ ರಾಜ್ಯ ಹಣಕಾಸು ನಿಗಮದ ೧೯೮೬-೮೭ನೇ ಸಾಲಿನ ಲೆಕ್ಕ ಪರಿಶೋಧಿತ ವರದಿ ಮತ್ತು ೧೯೮೭-೮೮ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ ಹಾಗೂ

ಆ. ೧೯೫೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಶಾಸನದ ೮(೭)ನೇ ಕಲಮಿನ ಮೇರೆಗೆ - ಅಧಿಸೂಚನೆ ಸಂಖ್ಯೆ ಎಫ್‌ಡಿ ೮೨ ಸಿಎಸ್‌ಎಲ್ ೮೮ ದಿನಾಂಕ ೩-೮-೧೯೮೮ರ ಬಗ್ಗೆ ತಿದ್ದೋಲೆಯನ್ನು ಮಾಡಲು ಹೊರಡಿಸಿದ ಅಧಿಸೂಚನೆ ಎಫ್‌ಡಿ ೨೦೫ ಸಿಎಸ್‌ಎಲ್ ೮೮ ದಿನಾಂಕ ೨೨-೯-೧೯೮೮ರ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು. ಈಗ ಮಾನ್ಯ ಪಟೇಲ್ ಅವರು ತಮ್ಮ ಪಸರಿನ ಮುಂದಿರುವ ಕಾಗದಪತ್ರಗಳನ್ನು ಮಂಡಿಸಬಹುದು.

ಶ್ರೀ ಜೆ. ಎಚ್. ಪಟೇಲ್(ಭಾರಿ ಮಂತ್ರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

೧೯೪೯ರ ಭಾರತೀಯ ವಿದ್ಯುಚ್ಛಕ್ತಿ (ಪೂರೈಕೆ) ಅಧಿ ನಿಯಮ ೮೯ನೇ ಪ್ರಕರಣದ (೫)ನೇ ಉಪ ಪ್ರಕರಣ ಮೇರೆಗೆ—

ಅ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ೧೯೮೫-೮೬ನೇ ಸಾಲಿನ ಲೆಕ್ಕಪತ್ರ ವರದಿ ಮತ್ತು ಆಯವ್ಯಯ ಪತ್ರ ಹಾಗೂ

ಆ. ೧೯೫೬ನೇ ಇಸವಿಯ ಕಂಪನಿ ಶಾಸನದ ೬೧೯(ಎ) ಕಲಮಿನ ಮೇರೆಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ೧೯೮೬-೮೭ನೇ ಸಾಲಿನ ವಾರ್ಷಿಕ ವರದಿಯನ್ನು ಹಾಗೂ

ಇ. ೧೯೮೫-೮೬ನೇ ಇಸವಿಯ ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್‌ನ ೯ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಖಾಸಗಿ ಕನ್ನಡ ಶಾಲೆಗಳಲ್ಲಿ ಉಪಾಧ್ಯಾಯನಿ ಹಾಗೂ ಸಹಾಯಕಿ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಸರ್ಕಾರದಿಂದ ಶೇಕಡ ೧೦೦ರಷ್ಟು ವೇತನವನ್ನು ಚೆಕ್ ಮೂಲಕ ಪಾವತಿ ಮಾಡುವ ಬಗ್ಗೆ ಅರ್ಜಿಯನ್ನು ಮಾನ್ಯ ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕಿನ ಕೋಡಿ ಬೆಂಗ್ರೆ ಗ್ರಾಮದ ಮಿನುಗಾರಿಕೆ, ಬೋಟು ತಂಗುದಾಣ ಮತ್ತು ಕೊರೆತ ತಡೆಗಟ್ಟುವ ಕೆಲಸ ಹಿಂದೆ ಬಿದ್ದಿರುವ ಬಗ್ಗೆ ಅರ್ಜಿಯನ್ನು ಮಾನ್ಯ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಸಭೆಗೆ ಅರ್ಜಿಗಳನ್ನು ಒಪ್ಪಿಸಲಾಯಿತು.

ವರದಿಗಳನ್ನೊಪ್ಪಿಸುವುದು.

ಅಧ್ಯಕ್ಷರು.—ಶ್ರೀ ಬಿ ಆರ್. ಯಾವಗಲ್ ಅವರ ಪರವಾಗಿ ಈ ಅರ್ಜಿ ಸಮಿತಿಯ ಸದಸ್ಯರು ಯಾರಾದರು ಸಭೆಗೆ ವರದಿಯನ್ನು ಒಪ್ಪಿಸಿ.

ಶ್ರೀ ಎ. ಎಂ. ಹಿಂಡಸ್‌ಗೇರಿ.—ಮಾನ್ಯ ಅಧ್ಯಕ್ಷರೇ, ಅರ್ಜಿಗಳ ಸಮಿತಿ ಪರವಾಗಿ ಈ ಕೆಳಕಂಡ ವರದಿಗಳನ್ನು ಸಭೆಗೆ ಒಪ್ಪಿಸುತ್ತೇನೆ.—

ಅ. ಆಹಾರ ಮತ್ತು ಸಾರಿಗೆ ಇಲಾಖೆ, ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಗೃಹ ಇಲಾಖೆಗಳಿಗೆ ಸಂಬಂಧಿಸಿದಂತೆ ಅರ್ಜಿಗಳ ಸಮಿತಿಯ ಆರನೇ ವರದಿಯನ್ನು,

ಆ. ಅರ್ಜಿಗಳ ಸಮಿತಿಯ ನಾಲ್ಕನೇ ವರದಿಯಲ್ಲಿ ಮಾಡಲಾಗಿದ್ದ ಶಿಫಾರಸ್‌ಗಳ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ಏಳನೆಯ ವರದಿಯನ್ನು ಹಾಗೂ

ಇ. ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ ಹಾಗೂ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನಸೇವಾ ಇಲಾಖೆಗಳಿಗೆ ಸಂಬಂಧಪಟ್ಟ ಎಂಟನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನು ಸಭೆಗೆ ಒಪ್ಪಿಸಲಾಯಿತು.